**ದಿನಾಂಕಃ 20-07-2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಡಿಜಿಪಿ ರವರಿಂದ ಪ್ರತಿವಾದಿ ಪರವಾಗಿಃ**

3. ಕಾರವಾರ ಬಂದರಿನ ಫೆಶಿಯಾ ವಾಲ್ ಕಟ್ಟಲು ಟೆಂಡರ್ ಕರೆಯಲಾಗಿತ್ತು . ಟೆಂಡರ್ ಕರೆದಿದ್ದಾಗ ನಾನು ಅದರಲ್ಲಿ ಭಾಗವಹಿಸುವಾಗ ಅಲ್ಲಿ ಯಾವ ಯಾವ ಕೆಲಸ ಮಾಡಬೇಕಾಗಿದೆ ಎಂದು ತಿಳಿದು ಮತ್ತು ಆ ಸ್ಥಳಗಳ ವಸ್ತು ಸ್ಥಿತಿ ತಿಳಿದು ನಾನು ಟೆಂಡರ್ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಟೆಂಡರ್ ಅತೀ ಕಡಿಮೆ ಮೊತ್ತದ್ದು ಆದಕಾರಣ ನನಗೆ ಅದು ಮಂಜೂರಾಯಿತು ಎಂದರೆ ಹೌದು . ಜೊತೆಗೆ ಸಾಕ್ಷಿ ನುಡಿಯುತ್ತಾರೆ ತಾಂತ್ರಿಕವಾಗಿ ಸಹ ನಮ್ಮ ಕಂಪನಿ ಅರ್ಹತೆ ಹೊಂದಿತ್ತು . ದಿನಾಂಕ 12.03.2013 ರಂದು ಕಾಮಗಾರಿಯ ಕಾರ್ಯಾದೇಶವನ್ನು ನಮಗೆ ನೀಡಲಾಯಿತು ಎಂದರೆ ಹೌದು . ಕಾರ್ಯಾದೇಶ ನೀಡುವುದಕ್ಕೆ ಮೊದಲು ನಮ್ಮ ಕಂಪನಿ ಕಾಮಗಾರಿ ಮಾಡಬೇಕಾದ ಸ್ಥಳಕ್ಕೆ ಹೋಗಲು ಬರಲು ಅನುಮತಿ ಪಡೆದುಕೊಳ್ಳಬೇಕಾಗಿತ್ತು ಎಂದರೆ ಸರಿಯಲ್ಲ. ಕಾಮಗಾರಿ ಆದೇಶ ನೀಡಿದ ದಿನಾಂಕದಿಂದ ನಮ್ಮ ಕಂಪನಿ ಕಾಮಗಾರಿ ಪ್ರಾರಂಭಿಸಲಿಲ್ಲ ಎಂದರೆ ಅದು ನಿಷೇಧಿತ ಪ್ರದೇಶವಾಗಿದ್ದ ಕಾರಣ ಗೇಟ್ ಪಾಸ್ ಕೊಟ್ಟ ನಂತರವೇ ನಾವು ಕೆಲಸ ಪ್ರಾರಂಭಿಸಲು ಸಾಧ್ಯವಾಯಿತು . ಗೇಟ್ ಪಾಸ್ ಪಡೆಯಲು ನಮ್ಮ ನೌಕರರ ಎಲ್ಲಾ ವಿವರವನ್ನು ಒದಗಿಸಬೇಕಾಗಿತ್ತು ಎಂದರೆ ಹೌದು ಅದನ್ನು ನಾವು ಕೊಟ್ಟಿದ್ದೆವು . ನಾವು ದಿನಾಂಕ 28.03.2013 ರಂದು ಅಲ್ಲಿ ಪ್ರವೇಶಿಸಲು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಇರಬಹುದು ನೆನಪಿಲ್ಲ. ನಾವು ಅರ್ಜಿ ಸಲ್ಲಿಸಿದಾಗ ಅದರಲ್ಲಿ ಕೆಲವು ಅವಶ್ಯಕ ದಾಖಲಾತಿಗಳನ್ನು ಹಾಜರುಪಡಿಸದೇ ಇದ್ದ ಕಾರಣ ನಮ್ಮ ಎಲ್ಲಾ ದಾಖಲಾತಿಗಳು ಬಂದ ನಂತರ ದಿನಾಂಕ 15.07.2013 ರಂದು ಪರಿಶೀಲಿಸಿ ನಮಗೆ ಅನುಮತಿ ಪತ್ರ ನೀಡಿದ್ದಾರೆ ಎಂದರೆ ನಾವು ಅವಶ್ಯಕ ದಾಖಲಾತಿಗಳನ್ನೆಲ್ಲಾ ಕೊಟ್ಟಿದ್ದೆವು ಆದರೆ ದಿನಾಂಕ 15.07.2013 ರಂದು ಅನುಮತಿ ಪತ್ರ ನೀಡಿದ್ದಾರೆ . ದಿನಾಂಕ 15.07.2013 ಅನ್ನು ನಾವು ಕಾಮಗಾರಿ ಪ್ರಾರಂಭಿಸಿದ ದಿನಾಂಕ ಎಂದು ಪರಿಗಣಿಸಲಾಗಿದೆ ಎಂದರೆ ಅದು ಪ್ರತಿವಾದಿ ಇಲಾಖೆಯವರು ತೆಗೆದುಕೊಂಡಿರುವ ನಿರ್ಣಯ . ಫೆಶಿಯಾ ವಾಲ್ ಕಾಮಗಾರಿಯನ್ನು 4 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಬೇಕಾಗಿತ್ತು ಎಂದರೆ ಹೌದು . ದಿನಾಂಕ 15.07.2013 ರಿಂದ 14.11.2013 ರೊಳಗೆ ಕಾಮಗಾರಿ

ಪೂರ್ಣಗೊಳಿಸಬೇಕಾಗಿತ್ತು ಎಂದರೆ ಅದು ಪ್ರತಿವಾದಿ ಇಲಾಖೆಯ ನಿರ್ಣಯ ಆಗಿದೆ . ನಾವು 4 ತಿಂಗಳ ಅವಧಿಯಲ್ಲಿ ಕಾಮಗಾರಿಯನ್ನು ಮುಗಿಸಲಿಲ್ಲ ಎಂದರೆ ಹೌದು ಆದರೆ ಅದಕ್ಕೆ ಕಾರಣ ಅವರು ಕಾಮಗಾರಿ ಪ್ರದೇಶವನ್ನು ನಮಗೆ ಹಸ್ತಾಂತರ ಮಾಡಲಿಲ್ಲ. ದಿನಾಂಕ 12.03.2013 ರಂದೇ ಕಾಮಗಾರಿ ಪ್ರದೇಶವನ್ನು ನಮ್ಮ ಕಂಪನಿಗೆ ಪ್ರತಿವಾದಿ ಹಸ್ತಾಂತರ ಮಾಡಿದ್ದಾರೆ ಎಂದರೆ ಸರಿಯಲ್ಲ.

4. ಕಾರವಾರ ಬಂದರು ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ ಎಂದರೆ ಹೌದು. ಅದನ್ನು ಸರ್ಕಾರದ ಅನುದಾನದಿಂದ ಅಭಿವೃದ್ಧಿ ಪಡಿಸಲಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಾರವಾರದ ಬಂದರಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಡಗುಗಳು ಬರುವುದು ಹೋಗುವುದು ಮಾಡುತ್ತವೆ ಎಂದರೆ ಹೌದು . ಹಡಗುಗಳು ಬಂದಾಗ 4-5 ದಿನ ಬಂದರಿನಲ್ಲಿ ಇದ್ದು ಹೋಗುತ್ತವೆ ಎಂದರೆ ನಿರಂತರವಾಗಿ ಹಡಗುಗಳು ಬರುತ್ತಿದ್ದವು . ನಾನು ಹೇಳಿದ ವಿಷಯವೆಲ್ಲಾ ಟೆಂಡರ್ ಕರಾರಿಗೆ ಸಂಬಂಧಪಟ್ಟಿದೆ ಎಂದರೆ ಹೌದು . ನನ್ನ ಕಂಪನಿ ಕಾಮಗಾರಿ ಕೈಗೊಂಡ ಸಮಯದಲ್ಲಿ ಅಂತರರಾಷ್ಟ್ರೀಯ ಹಡಗುಗಳು ಬಾರದಂತೆ ತಡೆಯಲು ಅಂತರರಾಷ್ಟ್ರೀಯ ಸರಕು ಸಾಗಾಣೆ ಕಾನೂನಿನಲ್ಲಿ ಅವಕಾಶ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆದರೆ ಟೆಂಡರ್ ಶರತ್ತಿನಲ್ಲಿ ಅದು ಇರಲಿಲ್ಲ. ಟೆಂಡರ್ ದರಪಟ್ಟಿ ಸಲ್ಲಿಸುವುದಕ್ಕೆ ಪೂರ್ವದಲ್ಲಿ ಕಾಮಗಾರಿ ಜಾಗವನ್ನು ನಾವು ಪರಿಶೀಲನೆ ಮಾಡಬೇಕಾಗಿರುತ್ತದೆ ಎಂದರೆ ಹೌದು .

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದಾರೆ . ಆದ್ದರಿಂದ ಮುಂದೂಡಲಾಯಿತು ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ